ಅಷ್ಟು ಹೇಳಿದ ಭಾಗು ದುಃಖದಿಂದ ಗದ್ಗದಿತನಾಗಿ ಸುಮ್ಮನಾದ. ಆದರೆ ಆ ದುಃಖದ ಅಲೆಗಳಲ್ಲೂ ತಡವರಿಸುತ್ತಾ ಹೇಳಿದ, 'ಸ್ವಾಮೀ! ನಿಮಗೆ ಗೊತ್ತಾ ಆತ ಯಾವ ಕಾಯಿಲೆಯಿಂದ ಸತ್ತ ಅಂತ? ಕೋಂಟೀನ್! ಕೋಂಟೀನ್‌ನಿಂದ!'

ಒಂದು ವೇಳೆ ಜನರಿಗೆ ನಿಜವಾದ ನರಕವನ್ನು ನೋಡುವ ಯೋಚನೆ ಬಂದು ಆ ನರಕದ ಹತ್ತಿರ ಹೊರಟು ಹೋದರೆ ಸುಮಾರು ದೂರದಿಂದಲೇ ಜನರ ನರಳಾಟದ ಧ್ವನಿ ಕಿವಿಗೆ ಅಪ್ಪಳಿಸುತ್ತದೆ. ಆ ವಾತಾವರಣದಲ್ಲಿ ತಾಯಂದಿರ ನರಳಾಟ, ಸಹೋದರಿಯರ ಚೀರಾಟ, ಹೆಂಡತಿಯರ ಗೋಳಾಟ, ಮಕ್ಕಳ ಕಿರುಚಾಟದಿಂದಾಗಿ ಗಾಢ ಕತ್ತಲೆಯ ವಾಸಿಗಳಾದ ಗೂಬೆಗಳು ಸಹ ಕೂಗಲು ಹಿಂಜರಿಯುವ ಹೃದಯವಿದ್ರಾವಕ ದೃಶ್ಯ ಕಾಣುತ್ತದೆ ಅಂದರೆ, ಮನೆಯಲ್ಲಿ ಅನಾರೋಗ್ಯಕ್ಕೆ ತುತ್ತಾದವರ ಮಡುಗಟ್ಟಿದ ಮನಸ್ಸುಗಳ ಗೋಡೆಗಳಿಂದ ನಿರಾಶೆಯ ಕಿರಣವನ್ನು ಕಂಡವರ ಸ್ಥಿತಿ ಏನಾಗಿರಬಾರದು? ಇವರ ನಿರಾಶೆ ಮಿತಿ ಮೀರಿ ಇವರು ಯಮಲೋಕದ ಚಿತ್ರಗುಪ್ತನನ್ನು ಕಾಣುತ್ತಿದ್ದರೆ ಎನಿಸುತ್ತದೆ. ಭಯಂಕರ ಚಂಡಮಾರುತದ ರಭಸಕ್ಕೆ ನೀರಿನ ಅಲೆಗಳು ಉಕ್ಕಿ ಶಿಖರದ ತುಟ್ಟತುದಿಯನ್ನು ನೀರಿನಲ್ಲಿ ಮುಳುಗಿಸಿಕೊಳ್ಳಲು ಕಾತರರಾಗಿದ್ದರೆ, ಶಿಖರವನ್ನು ಗಟ್ಟಿಯಾಗಿ ತಬ್ಬಿಹಿಡಿದ ಕ್ವಾರಂಟೈನ್ ರೋಗಿಗಳು ಪ್ರಾಣ ಉಳಿಸಿಕೊಳ್ಳಲು ಹಪಹಪಿಸುತ್ತಿದ್ದರು.

ಆ ದಿನ ನಾನು ಖಿನ್ನತೆಗೆ ಒಳಗಾಗಿ ಕ್ವಾರಂಟೈನ್‌ಗೆ ಹೋಗದೆ, ಯಾವುದೋ ಮುಖ್ಯವಾದ ಕೆಲಸದ ಸಬೂಬು ಹೇಳಿ ಮನೆಯಲ್ಲೇ ಉಳಿದೆ. ಆದರೆ ನನ್ನ ಆತ್ಮ ನನ್ನನ್ನು ಧಿಕ್ಕರಿಸುತ್ತಿತ್ತು. ಏಕೆಂದರೆ ಕನಿಷ್ಠ ಪಕ್ಷ ಒಬ್ಬ ರೋಗಿಗಾದರೂ ನನ್ನಿಂದ ಸಹಾಯವಾಗುವ ಸಾಧ್ಯತೆ ಇತ್ತು. ಆದರೆ ನನ್ನ ಹೃದಯದಲ್ಲಿ ಮತ್ತು ಮನಸ್ಸಿನಲ್ಲಿ ಸಾವಿನ ಭಯ ಆವರಿಸಿತ್ತು. ಸಂಜೆ ಮಲಗಿದ್ದಾಗ, ಇವತ್ತು ಸುಮಾರು ಐನೂರು ರೋಗಿಗಳು ಕ್ವಾರಂಟೈನ್‌ಗೆ ಬಂದಿದ್ದಾರೆ ಎಂಬ ಮಾಹಿತಿ ಬಂತು.

ನಾನು ಆಗತಾನೆ ಕರುಳಿಗೆ ಬಿಸಿ ಮುಟ್ಟಿಸುವಂತಹ ಕಾಫಿ ಕುಡಿದು ಮಲಗಲು ಹೊರಟಿದ್ದೆ. ಅಷ್ಟರಲ್ಲಿ ಬಾಗಿಲ ಬಳಿ ಭಾಗುವಿನ ದನಿ ಕೇಳಿಸಿತು. ಮನೆಗೆಲಸದವನು ಬಾಗಿಲು ತೆರೆದ. ಭಾಗು ಏದುಸಿರು ಬಿಡುತ್ತಾ ಗಾಬರಿಯಿಂದ ಒಳಗೆ ಬಂದು, 'ಸ್ವಾಮಿ! ನನ್ನ ಹೆಂಡತಿ ಕಾಯಿಲೆಯಿಂದ ನರಳುತ್ತಿದ್ದಾಳೆ... ಅವಳ ಕುತ್ತಿಗೆಯಲ್ಲಿ ಗಂಟುಗಳು ಬಂದಿವೆ... ದಮ್ಮಯ್ಯ ಅಂತೀನಿ. ಅವಳನ್ನ ಉಳಿಸಿ... ಒಂದೂವರೆ ವರ್ಷದ ಮಗು ಎದೆ ಹಾಲು ಕುಡಿತಾ ಇದೆ, ಇವಳಿಗೆ ಏನಾದ್ರೂ ಅದ್ರೆ ಅದೂ ಸತ್ತೋಗುತ್ತೆ.'

ಆಳವಾದ ಸಹಾನುಭೂತಿಯನ್ನು ವ್ಯಕ್ತಪಡಿಸುವ ಬದಲು, ನಾನು ನಿರ್ಲಕ್ಷ್ಯದಿಂದ ಕೇಳಿದೆ, 'ಮೊದ್ಲೇ ಯಾಕೆ ಬರಕ್ಕಾಗ್ಲಿಲ್ಲ? ರೋಗ ಇವಾಗ ಶುರು ಆಗಿದೆಯಾ?'

'ಬೆಳಗ್ಗೆ ಸ್ವಲ್ಪ ಜ್ವರ ಇತ್ತು – ನಾನು ಕೋಂಟೀನ್‌ಗೆ ಹೋದಾಗ...'

'ಏನು? ಅವಳು ಮನೇಲಿ ಕಾಯಿಲೆಯಿಂದ ನರಳ್ತಾ ಇದ್ರೆ ನೀನು ಕ್ವಾರಂಟೈನ್‌ಗೆ ಹೋಗಿದ್ಯಾ?'

'ಹೂಂ ಸ್ವಾಮೀ' ಭಾಗು ನಡುಗುತ್ತಾ ಹೇಳಿದ, 'ಅವಳು ಸ್ವಲ್ಪ ಅನಾರೋಗ್ಯದಿಂದ ಬಳಲುತ್ತಿದ್ದಳು ಅಷ್ಟೇ. ಎದೆ ಹಾಲು ಉಕ್ಕಿದೆ ಅಂದ್ಕೊಂಡೆ. ಅದು ಬಿಟ್ಟು ಬೇರೆ ಯಾವ ತೊಂದರೇನೂ ಇರ್ಲಿಲ್ಲ. ನನ್ನ ಸಹೋದರರಿಬ್ಬರೂ ಮನೆಯಲ್ಲೇ ಇದ್ರು. ಅಲ್ಲದೆ ಕೋಂಟಿನ್‌ನಲ್ಲಿ ಸಾವಿರಾರು ರೋಗಿಗಳು ಅಸಹಾಯಕರಾಗಿ...' ಭಾಗು ನಿಲ್ಲಿಸಿದ.

'ಅಂದ್ರೆ ನೀನು ಮಿತಿಮೀರಿ ತ್ಯಾಗ, ಬಲಿದಾನ ಮಾಡಿ ವೈರಾಣುಗಳನ್ನ ಮನೆಗೆ ತಂದೇ ಬಿಟ್ಟೆ. ನಾನ್ ನಿನಗೆ ಎಷ್ಟು ಸಲ ಹೇಳಿಲ್ಲ – ರೋಗಿಗಳ ಹತ್ರ ಜಾಸ್ತಿ ಇರಬೇಡ ಅಂತ... ನೋಡು ಅದಕ್ಕೇನೇ ನಾನ್ ಇವತ್ತು ಅಲ್ಲಿ ಹೋಗ್ಲಿಲ್ಲ. ಇದಕ್ಕೆಲ್ಲ ನೀನೇ ಹೊಣೆ. ಈಗ ನನ್ನಿಂದೇನಾಗತ್ತೆ? ನಿನ್ನಂತಹ ಯೋಧ ಯುದ್ಧ ಎದುರಿಸಲೇಬೇಕು – ನಗರದಲ್ಲಿ ಸಾವಿರಾರು ರೋಗಿಗಳು ಬಿದ್ದಿದ್ದಾರೆ...' ಅಂದೆ.